

# ಪೊಂಪೈ

## ಅಗ್ನಿ ನುಂಗಿದ ನಗರ

ಋಷಿಗಳು, ದೇವರುಗಳ ಶಾಪದಿಂದ, ತಾನೇ ಮಾಡಿದ ಪಾಪಗಳಿಂದ ಮನುಷ್ಯರು, ಪ್ರಾಣಿಗಳು ಕಲ್ಲಾಗಿಬಿಟ್ಟ ಕಥೆ ಕೇಳಿದ್ದೇವೆ. ಅನ್ಯರ ನೋವಿಗೆ ಸ್ಪಂದಿಸದ ಕ್ರೂರಿಗಳನ್ನು ಕಲ್ಲೆದೆಯವನು ಎಂದು ಹಿಡಿಶಾಪ ಹಾಕುವುದೂ ನಮಗೆ ಗೊತ್ತಿದೆ. ‘ಮಂಕುತಿಮ್ಮನ ಕಗ್ಗ’ದ ಡಿ.ವಿ. ಗುಂಡಪ್ಪನವರು ‘ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ’ ಎಂದಿದ್ದಾರೆ. ಇವೆಲ್ಲವೂ ಪುರಾಣ, ಕಲ್ಪನೆ, ಕಾವ್ಯದ ಮಾತಾಯಿತು. ವಾಸ್ತವದಲ್ಲಿ ಮನುಷ್ಯ ಕಲ್ಲಾಗುವುದುಂಟೆ?

ಇಟಲಿಯ ನೇಪಲ್ಸ್ ಎಂಬ ನಗರದ ಸಮೀಪದಲ್ಲಿರುವ ಪೊಂಪೈ ಎಂಬ ನಗರಕ್ಕೆ ಹೋದರೆ ಅಡಿಗಡಿಗೆ ನಿಮಗೆ ಕಲ್ಲಾದ ಮನುಷ್ಯರ ಕಳೇಬರ ಎದುರಾಗುತ್ತದೆ. ಆಕಾಶಮುಖಿಯಾಗಿ ಬಿದ್ದಿರುವ ‘ಶಿಲಾಮಾನವ’ನ ಕಿಸಿದ ಬಾಯಲ್ಲಿ ಇನ್ನೂ ಉಳಿದಿರುವ ಹಲ್ಲುಗಳು, ಮೊಣಕಾಲ ಮೇಲೆ ಕೈಯೂರಿ ಮುದುಡಿ ಕೂತಂತೆಯೇ ಕಲ್ಲಾಗಿ ಹೋದ ಮನುಷ್ಯ, ಗೋಡೆಗೆ ಒರಗಿಕೊಂಡು ಅಂಗಾತ ಬಿದ್ದು ಕಲ್ಲಾದವರ ಬುಡದಲ್ಲಿಯೇ ತಾವೂ ಕಲ್ಲಾಗಿಹೋದ ಪುಟ್ಟ ಪುಟ್ಟ ಮಕ್ಕಳು... ಅಬ್ಬಾ! ನಾವು ಯಾವ ಲೋಕದಲ್ಲಿದ್ದೇವೆ ಎಂದು ಒಂದು ಕ್ಷಣ ದಿಗ್ಭ್ರಮೆಯಾಗಿಬಿಡುತ್ತದೆ.

ನಗರದುದ್ದಕ್ಕೂ ಚೆಲ್ಲಾಡಿಕೊಂಡಿರುವ ಮನುಷ್ಯ–ಪ್ರಾಣಿಗಳ ಈ ಕಲ್ಲಿನ ಕಳೇಬರಗಳಿಗೂ ಒಂದು ಕರಾಳ ಇತಿಹಾಸವಿದೆ. ಅದರ ಜಾಡನ್ನು ಹಿಡಿದು ಹೋದರೆ ಹತ್ತಿರ ಹತ್ತಿರ ಎರಡು ಸಾವಿರ ವರ್ಷಗಳ ಹಿಂದಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ.

ಈ ಪ್ರಾಚೀನ ನಗರವನ್ನು ಈ ಸ್ಥಿತಿಗೆ ತಲುಪಿಸಿದ್ದು ‘ವಸುವಿಯಸ್’ ಹೆಸರಿನ ಪರ್ವತ. ಅದು ತನ್ನ ಒಡಲಿಂದ ಕಕ್ಕಿದ ಜ್ವಾಲಾಮುಖಿ ಆಸ್ಫೋಟ. 13ರಿಂದ 20 ಅಡಿ ಎತ್ತರದಷ್ಟು ಬೃಹತ್ ಗಾತ್ರದ ಲಾವಾ, ಬಿಸಿಯಾದ ಹೊಗೆ ಮತ್ತು ಬೂದಿ ಈ ಪಟ್ಟಣಕ್ಕೆ ಹರಿದು ಬಂದು ಪೊಂಪೈ ಮತ್ತು ಹಕ್ರ್ಯುಲೇನಿಯಮ್ ಪಟ್ಟಣಗಳು ನಾಶವಾದವು. ಸೆಕೆಂಡಿಗೆ 1.5 ದಶಲಕ್ಷ ಟನ್‌ಗಳಷ್ಟು ಬಿಸಿಯಾದ ಕಲ್ಲುಗಳು, ವಿಷಾನಿಲಗಳ ಮೋಡ, ಕರಗಿದ ಬಂಡೆ, ಕಲ್ಲಿನ ಹುಡಿ ಮತ್ತು ಬಿಸಿ ಬೂದಿಯನ್ನು ಹೊರಹಾಕಿ ಸುಮಾರು 1,00,000 ಪಟ್ಟು ಉಷ್ಣಶಕ್ತಿಯನ್ನು ಬಿಡುಗಡೆ ಮಾಡಿತು. ಬೂದಿ ಮತ್ತು ಲಾವಾ ಬಿಸಿಯಾಗಿದ್ದಾಗ ಕೆಂಪಾಗಿ ದ್ರವದಂತಿದ್ದು ತಣ್ಣಗಾಗಲು ಹಲವಾರು ವರ್ಷಗಳೇ ತೆಗೆದುಕೊಂಡಿತು. ಈ ಬೂದಿಯು ಸಂಪೂರ್ಣ ತಣ್ಣಗಾದಾಗ ಕಪ್ಪಗಿನ ಬಂಡೆಕಲ್ಲಿನ ರೂಪವನ್ನು

